ಆಶಾ ಜ್ಯುವೆಲ್ಲರ್ಸ್
ಕನಕದಾಸ ರಸ್ತೆ, ಉಡುಪಿ 576101. ಫೋನ್: 0820 2523514

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಡಿಸೆಂಬರ್ 23, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 12+8+4

CENTRAL LIBRARY
Adyar, Mangalore-7

# ಐಇಎಸ್ಎ-ಮೇಘಾನ್ 2018 ಸ್ಪರ್ಧೆಯಲ್ಲಿ ರನ್ನರ್‌ಅಪ್



ರನ್ನರ್‌ಅಪ್ ಪ್ರಶಸ್ತಿ ವಿಜೇತ ಅಡ್ಯಾರಿನ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿ ತಂಡ.

**ಮಹಾನಗರ,** ಡಿ. 22: ಹೊಸದಿಲ್ಲಿಯಲ್ಲಿ ನಡೆದ ಐಇಎಸ್ಎ-ಮೇಘಾನ್ 2018 ಸ್ಪರ್ಧೆಯಲ್ಲಿ ಅಡ್ಯಾರಿನ ಸಹ್ಯಾದ್ರಿ ಕಾಲೇಜಿನ ವಿದ್ಯಾರ್ಥಿಗಳು ರನ್ನರ್‌ಅಪ್ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ದಕ್ಷಿಣ ಏಷ್ಯಾದಲ್ಲಿ ಅತಿದೊಡ್ಡ ವಿನ್ಯಾಸದ ಕಾರ್ಯಕ್ರಮವಾಗಿದ್ದು, ಒಟ್ಟು 20 ತಂಡಗಳನ್ನು ಆಯ್ಕೆ ಮಾಡಲಾಯಿತು. ಸಹ್ಯಾದ್ರಿಯ ಐದನೇ ಸೆಮಿಸ್ಟರ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಾದ ನಿತಿನ್ ಟಿ. ಮತ್ತು ಸಹ್ಯಾದ್ರಿ ಕಾಲೇಜು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್ ಎಂಜಿನಿಯರಿಂಗ್ ವಿಭಾಗದ ಪ್ರದೀಪ್ ಕುಮಾರ್ ಮತ್ತು ಆರ್ಡಿಎಲ್ ಟೆಕ್ನಾಲಜೀಸ್ ಜಂಟಿಯಾಗಿ ಬೆಂಗಳೂರಿನ ಆಯ್ಕೆಯ ಸುತ್ತಿನಲ್ಲಿ ಪಾಲ್ಗೊಂಡು. ಅಂತಿಮ ಸುತ್ತಿಗೆ ಗೋಲ್ಡನ್ ಟಿಕೆಟ್ ಗೆದ್ದರು.

ದಿಲ್ಲಿಯಲ್ಲಿ ನಡೆದ ಅಂತಿಮ ಸಮಾರಂಭದಲ್ಲಿ ಈ ತಂಡವನ್ನು 2ನೇ ರನ್ನರ್-ಅಪ್ ಪಡೆದುಕೊಂಡರು. ಇದು ಬಹುಮಾನವು ಫಲಕ, ಇನ್ಕ್ಯುಬೇಷನ್ ಅವಕಾಶಗಳು ಮತ್ತು ಇತರ ಪ್ರಯೋಜನಗಳನ್ನು ಒಳಗೊಂಡಿದೆ.